ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

e-mail : registrar@uni-mysore.ac.in
www.uni-mysore.ac.in

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ2(ಎಸ್)/34/1990-91

ದಿನಾಂಕ: 06.08.2018

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಪದವಿ ಕೋರ್ಸ್‌ಗಳ ಎರಡುಪಟ್ಟು ಅವಧಿ ಮುಗಿದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆ ಬರೆಯಲು ಅಂತಿಮವಾಗಿ ಅವಕಾಶ ನೀಡುವ ಬಗೆಗೆ.

ಉಲ್ಲೇಖ: 1. ಈ ಕಛೇರಿ ಇದೇ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 31.12.2014.
2. ಈ ಕಛೇರಿ ಇದೇ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 02.02.2016.
3. ಈ ಕಛೇರಿ ಇದೇ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 06.02.2017.
4. ದಿನಾಂಕ 19.06.2018ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ತೀರ್ಮಾನ.

******

ದಿನಾಂಕ 19.06.2018ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ತೀರ್ಮಾನದಂತೆ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ (ವಾರ್ಷಿಕ ಹಾಗೂ ಸೆಮಿಸ್ಟರ್) ಪದ್ಧತಿ ಕೋರ್ಸ್‌ಗಳು (ಬಿ.ಎಡ್. ಹಾಗೂ ಕಾನೂನು ಪದವಿಯ ಆರ್‌ಆರ್, ಸಿಎಸ್‌ಎಸ್ ಮತ್ತು ಐಎಸ್‌ಎಸ್ ಸ್ಕೀಂ ಸೇರಿದಂತೆ) ಮತ್ತು ಡಿಪ್ಲೊಮಾ ಸ್ನಾತಕೋತ್ತರ (Professional Course ಗಳು ಸೇರಿದಂತೆ) ಎಲ್ಲಾ ಕೋರ್ಸ್‌ಗಳಿಗೆ ಅನ್ವಯವಾಗುವಂತೆ 'Double the Duration' ಅವಧಿಯಾದ ನಂತರವು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದ ರೀತಿಯೇ (ವಿದ್ಯಾರ್ಥಿಗಳು ಹಿಂದೆ ವ್ಯಾಸಂಗ ಮಾಡಿದ್ದ ಸ್ಕೀಂ ಹಾಗೂ ಅಭ್ಯಸಿಸಿದ್ದ ಪಠ್ಯಕ್ರಮಕ್ಕೆ ಅನುಗುಣವಾಗಿ) ಪ್ರಸ್ತುತ 2018-19ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯಿಸುವಂತೆ ಪುನಃ ಅಂತಿಮವಾಗಿ ಒಂದು ವರ್ಷದ ಅವಧಿಗೆ (ಒಂದು ಪ್ರಯತ್ನವನ್ನು/ ಸೆಮಿಸ್ಟರ್‌ವಾರು) ಪರೀಕ್ಷೆ ಬರೆಯಲು ಕಟ್ಟಕಡೆಯ ಒಂದು ಕಾಲಾವಕಾಶ ನೀಡಲು ಅನುಮತಿಯನ್ನು ನೀಡಲಾಗಿದೆ.

ಈ ಅಧಿಸೂಚನೆಯಲ್ಲಿ ನೀಡಲಾಗಿರುವ ಹೆಚ್ಚುವರಿ ಅವಕಾಶಕ್ಕಾಗಿ ಪರೀಕ್ಷಾ ಶುಲ್ಕವನ್ನು ಕುಲಸಚಿವ(ಪರೀಕ್ಷಾಂಗ)ರವರು ಪರೀಕ್ಷಾ ಅಧಿಸೂಚನೆಯಲ್ಲಿ ತಿಳಿಸುವಂತೆ ಶುಲ್ಕ ಪಾವತಿಸಲು ಆಯಾ ಕಾಲೇಜು/ಸಂಬಂಧಪಟ್ಟ ಅಧ್ಯಯನ ವಿಭಾಗಗಳಿಂದಲೇ ವಿದ್ಯಾರ್ಥಿಗಳಿಗೆ ತಿಳಿಸುವುದು.

ಕುಲಸಚಿವರಿಂದ ಕರಡು ಅನುಮೋದಿಸಿದೆ

ಉಪ ಕುಲಸಚಿವ(ಶೈಕ್ಷಣಿಕ)

ಗೆ:

1. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-ರವರಿಗೆ ಮೇಲ್ಕಂಡ ಅಧಿಸೂಚನೆಯಲ್ಲಿ ಸ್ಕೀಂಗಳಲ್ಲದೆ ಒಂದು ಪಕ್ಷ ಇನ್ನಿತರ ಸ್ಕೀಂ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಸಿದಲ್ಲಿ ಅಂತಹವರಿಗೂ ಸಹ ಪರೀಕ್ಷೆ ನಡೆಸಲು ಹಾಗೂ ಶುಲ್ಕದ ಬಗ್ಗೆ ಅಧಿಸೂಚನೆ ಹೊರಡಿಸಲು ಸೂಕ್ತ ಕ್ರಮವಹಿಸಲು ತಿಳಿಸಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
5. ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟ ಘಟಕ ಕಾಲೇಜುಗಳ ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಇದನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾಗಿ ಕೋರಿದೆ.
6. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ/ಹಾಸನ/ಚಾಮರಾಜನಗರ.
8. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ಲಲಿತ ಕಲೆಗಳ ಕಾಲೇಜು ಕಟ್ಟಡ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು.
10. ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ನಿರ್ದೇಶಕರು, CFTRI/DFRL/AIISH/CSRTI/CIST, ಮೈಸೂರು.
12. ಪ್ರೊ.ಹೇಮಂತ್ ಕುಮಾರ್, ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಈ ಅಧಿಸೂಚನೆಯಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
13. ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಾರ್ತಾಭವನ, ದಾಸಪ್ಪ ವೃತ್ತ, ಮೈಸೂರು- ಈ ಅಧಿಸೂಚನೆಯ ಅಂಶವನ್ನು ವಿದ್ಯಾರ್ಥಿಗಳ ಮತ್ತು ಪೋಷಕರ ಅನುಕೂಲಕ್ಕಾಗಿ ಆಗ್ಗಿಂದಾಗ್ಗೆ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಕೋರಿದೆ (50 ಪ್ರತಿ ಲಗತ್ತಿಸಿದೆ).
14. ನಿಲಯದ ನಿರ್ದೇಶಕರು, ಪ್ರಸಾರ ಭಾರತಿ ಯಾದವಗಿರಿ, ಮೈಸೂರು - ಅವರಿಗೆ ಪ್ರಸ್ತುತ ಅಧಿಸೂಚನೆಯ ಅಂಶಗಳನ್ನು ವಿದ್ಯಾರ್ಥಿಗಳ ಹಾಗೂ ಪೋಷಕರ ಮಾಹಿತಿಗಾಗಿ ರೇಡಿಯೋ ಮತ್ತು ಟಿ.ವಿ.ಗಳಲ್ಲಿ ಆಗ್ಗಿಂದಾಗ್ಗೆ ಭಿತ್ತರಿಸಬೇಕಾಗಿ ಕೋರಿದೆ.
15. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು- ಸೂಕ್ತ ಕ್ರಮಕ್ಕಾಗಿ.
16. ಎಲ್ಲಾ ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು/ಎಲ್ಲಾ ಕಾರ್ಯನಿರ್ವಾಹಕರು (ಶೈಕ್ಷಣಿಕ ವಿಭಾಗ/ ಪರೀಕ್ಷಾಂಗ ಸ್ನಾತಕ/ಸ್ನಾತಕೋತ್ತರ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
17. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಕಛೇರಿ ಪ್ರತಿ.